# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್‌ಸಿ. 68/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹದೇವಸ್ವಾಮಿ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಸಿದ್ದವೀರಪ್ಪ | | **25.02.2025** |
| **ವಯಸ್ಸು** | ಃ 52 ವರ್ಷ | | |
| **ವೃತ್ತಿ** | ಃ ವಾಟರ್ ಮ್ಯಾನ್ | **ಪ್ರಾ.ಸಾ.** | ಃ 11 |
| **ವಾಸಸ್ಥಳ** | ಃ ಮರಹಳ್ಳಿಪುರ | **ಚಾ.ಸಾ.** | ಃ 15 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಪರಶಿವಪ್ಪ ನನ್ನ ಭಾವನಿರುತ್ತಾನೆ. ದಿಃ*29.11.2023* ರಂದು ಮೃತ ಪರಶಿವಪ್ಪ ಮರಣಹೊಂದಿದ್ದಾರೆ. ನೇತ್ರಾವತಿ ನನ್ನ ಅಕ್ಕನ ಮಗಳಿರುತ್ತಾಳೆ. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇದೆ. 2 ನೇ ಆರೋಪಿ ಪ್ರಭುಸ್ವಾಮಿ ಪರಶಿವಪ್ಪ ರವರ ಅಣ್ಣನಿರುತ್ತಾನೆ. *1* ನೇ ಆರೋಪಿ ಆದೀಶ *2* ನೇ ಆರೋಪಿತನ ಮಗನಿರುತ್ತಾನೆ. ಮೃತ ಪರಶಿವಪ್ಪ ವ್ಯವಸಾಯದ ಕೆಲಸ ಮಾಡುತ್ತಿದ್ದರು. ಆರೋಪಿತರು ಸಹ ವ್ಯವಸಾಯದ ಕೆಲಸ ಮಾಡುತ್ತಾರೆ. ಮೃತ ಪರಶಿವಪ್ಪ ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿವೆ. ಪರಶಿವಪ್ಪ ಇವರ *15* ವರ್ಷಗಳ ಕಾಲ ವ್ಯವಸಾಯದಲ್ಲಿ ಲಾಭ ಬರುವುದಿಲ್ಲ ಎಂದು ಅವರ ಜಮೀನನ್ನು ಸಾಗುವಳಿ ಮಾಡದೇ ಹಾಗೇ ಬಿಟ್ಟಿದ್ದರು. ಆ ಜಮೀನಿನಲ್ಲಿ ಆರೋಪಿತರು ತಿರುಗಾಡುತ್ತಿದ್ದರು ಮತ್ತು ತಮ್ಮ ದನಗಳನ್ನು ಮೇಯಿಸುತ್ತಿದ್ದರು. ಪರಶಿವಪ್ಪ ಇವರು ಮರಣಹೊಂದುವ *15* ದಿನಗಳ ಮುಂಚೆ ಟ್ರಾಕ್ಟರ್ ನಿಂದ ತನ್ನ ಜಮೀನನ್ನು ಉಳುಮೆ ಮಾಡಿಸಿದ್ದ. ಮೊದಲಿಗೆ ಆರೋಪಿತರು ಪರಶಿವಪ್ಪ ಇವರ ಜಮೀನಿನ ಮುಖಾಂತರ ಅವರ ಜಮೀನಿಗೆ

ಹೊಗುತ್ತಿದ್ದರು. ಉಳುಮೆ ಮಾಡಿದಾಗ ಪರಶಿವಪ್ಪ ಇವರು ಆರೋಪಿತರಿಗೆ ಜಮೀನಿನ ಬದಿಯಲ್ಲಿ ತಿರುಗಾಡುವಂತೆ ಹೇಳಿದ್ದ ಆದರೆ ಅವರು ಮೊದಲಿನಂತೆಯೇ ಜಮೀನಿನ ಮಧ್ಯದಲ್ಲೇ ತಿರುಗಾಡುತ್ತಿದ್ದರು. ಆ ಕಾಲಕ್ಕೆ ಪರಶಿವಪ್ಪ ಇವರು ಜಮೀನಿನ ಪಕ್ಕದಲ್ಲಿ ತಿರುಗಾಡಿ ಎಂದು ಹೇಳಿ ಚೆನಾಕ್ಷಿ ಮರ ಕಡಿಸಿದ್ದರು. ಆದರೆ ಆ ರೀತಿ ಕಡಿಸಿದ ಮರಗಳನ್ನು ಅಲ್ಲಿಯೇ ಬಿಟ್ಟಿದ್ದರು. ಆದ್ದರಿಂದ ದಾರಿ ಪೂರ್ಣಗೊಂಡಿರಲಿಲ್ಲ.

*2.* ಪರಶಿವಪ್ಪ ಮರಣಹೊಂದಿದ ಕಾಲಕ್ಕೆ ನಾನು ***9945839549*** ಸಂಖ್ಯೆಯ ಮೊಬೈಲ್ ಅನ್ನು ಬಳಸುತ್ತಿದ್ದೆ. ದಿಃ*29.11.2023* ರಂದು ನಾನು ಕೊನನೂರಿನಲ್ಲಿದ್ದಾಗ ಸಂಜೆ ***5.35*** ಕ್ಕೆ ***1*** ನೇ ಆರೋಪಿ ಆದೀಶ ನನಗೆ ಕರೆ ಮಾಡಿ ನಿನ್ನ ಭಾವನನ್ನು ತೊಡೆ ತರಿದುಹಾಕಿದ್ದೇನೆ ಚೀಲ ತಂದು ತುಂಬಿಕೊಂಡು ಹೋಗು ಎಂದು ಹೇಳಿದ್ದ. ಆದರೆ *1* ನೇ ಆರೋಪಿತನ ಮೊಬೈಲ್ ಸಂಖ್ಯೆ ನೆನಪಿಲ್ಲ. ಆ ವಿಷಯ ತಿಳಿದು ನಾನು ಆ ಸ್ಥಳಕ್ಕೆ ಹೋಗಿದ್ದೆ. ಫೋನ್ ಬಂದು *10* ನಿಮಿಷಕ್ಕೆ ನಾನು ಅಲ್ಲಿಗೆ ಹೋಗಿದ್ದೆ. ನಾನು ಹೋದಾಗ ಅಲ್ಲಿ ಆರೋಪಿತರು ಹಾಜರಿದ್ದರು. ಪರಶಿವಪ್ಪನ ಹೆಂಡತಿ ಸಹ ಹಾಜರಿದ್ದರು. ನಾನು ಹೋದ ಬಳಿಕ ನನ್ನ ಅಕ್ಕನ ಅಳಿಯ ಮಹೇಶ ಬಂದಿದ್ದ. ಆ ಕಾಲಕ್ಕೆ ಆದೀಶನ ಕೈಯಲ್ಲಿ ಒಂದು ಮಚ್ಚು ಇತ್ತು. ನಾನು ಹೋದ ಬಳಿಕವೂ ಸಹ ಆದೀಶ ಮಚ್ಚಿನಿಂದ ಪರಶಿವಪ್ಪನಿಗೆ ಹೊಡೆದಿದ್ದ. ನಾನು ಅಲ್ಲಿಗೆ ಬಂದ ಬಳಿಕ ಆರೋಪಿತರು ಅಲ್ಲಿಂದ ಹೊರಟು ಹೋಗಿದ್ದರು. ಆ ಕಾಲಕ್ಕೆ ಪರಶಿವಪ್ಪನಿಗೆ ಕಾಲುಗಳಿಗೆ ಮತ್ತು ಎರಡು ತೋಳುಗಳಿಗೆ ಮಚ್ಚಿನಿಂದ ಹೊಡೆದ ಗಾಯಗಳಾಗಿದ್ದವು. ಆ ಕಾಲಕ್ಕೆ ಪರಶಿವಪ್ಪ ಮಾತನಾಡುತ್ತಿದ್ದ. ನಂತರ ಓಮ್ನಿ ವಾಹನ ತರಿಸಿಕೊಂಡು ಸಂಜೆ ***7-7.30*** ಕ್ಕೆ ಮೈಸೂರಿನ ಮಿಷಿನ್ ಆಸ್ಪತ್ರೆಗೆ ಸೇರಿಸಿದ್ದೆವು. ಆ ಕಾಲಕ್ಕೆ ಪರಶಿವಪ್ಪ ಇವರು ಪ್ರಭುಸ್ವಾಮಿ ಕಣ್ಣಿಗೆ ಮಣ್ಣು ಎರಚಿದ್ದ ಮತ್ತು ಆತನ ಮಗ ಹೊಡೆದಿದ್ದ ಎಂದು ಹೇಳಿದ್ದ. ಮರಗಳನ್ನು ದಾರಿಯಲ್ಲಿ ಹಾಕಿದ್ದರಿಂದ ಆರೋಪಿತರು ಪರಶಿವಪ್ಪನಿಗೆ ಹೊಡೆದಿದ್ದರು. ಆ ಕಾಲಕ್ಕೆ ಪರಶಿವಪ್ಪ ಇವರು ಧರಿಸಿದ್ದ ಬಟ್ಟೆಗಳಿಗೆ ರಕ್ತ ಆಗಿತ್ತು ಮತ್ತು ನೆಲದ ಮೇಲೂ ಸಹ ರಕ್ತ ಆಗಿತ್ತು. ಆ ಕಾಲಕ್ಕೆ

ಆರೋಪಿ ಆದೀಶ ಮಚ್ಚನ್ನು ಅಲ್ಲಿಯೇ ಬಿಟ್ಟು ಹೋಗಿದ್ದನೋ ಅಥವಾ ತೆಗೆದುಕೊಂಡು ಹೋಗಿದ್ದನೋ ಗೊತ್ತಿಲ್ಲ. ಅದೇ ದಿನ ರಾತ್ರಿ *1.10* ಗಂಟೆಗೆ ಪರಶಿವಪ್ಪ ಮರಣಹೊಂದಿದ್ದ. ತನಗೆ ಆಗಿದ್ದ ಗಾಯಗಳ ಕಾರಣಕ್ಕೆ ರಕ್ತ ಸ್ರಾವವಾಗಿದ್ದರಿಂದ ಪರಶಿವಪ್ಪ ಮರಣಹೊಂದಿದ್ದ. ಆ ಕಾಲಕ್ಕೆ ಮಹದೇವಮ್ಮ ಪೊಲೀಸ್ ದೂರು ಕೊಟ್ಟಿದ್ದರು. ನಂತರ ಶವ ಪರೀಕ್ಷೆ ಮಾಡಿ ಶವವನ್ನು ಕೊಟ್ಟಿದ್ದರು.

*3.* ದಿಃ*03.12.2023* ರಂದು ನನ್ನನ್ನು ಪೊಲೀಸರು ಠಾಣೆಗೆ ಕರೆಸಿದ್ದರು. ಆ ಕಾಲಕ್ಕೆ ಈ ದಿನ ನಾನು ಹೇಳಿದ್ದ ಎಲ್ಲಾ ವಿಷಯಗಳನ್ನು ಪೊಲೀಸರು ಮುಂದೆ ಹೇಳಿದ್ದೆ ಅವರು ಟೈಪ್ ಮಾಡಿಕೊಂಡಿದ್ದರು. ನಂತರ ನನ್ನನ್ನು ದಿಃ*05.12.2023* ರಂದು ನಂಜನಗೂಡು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿಯೂ ಸಹ ನಾನು ಹೇಳಿಕೆ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿ.ಪಿ-*29* ಮತ್ತು ಸಹಿಯನ್ನು ನಿ.ಪಿ-*29(ಎ)* ಎಂದು ಗುರುತಿಸಿದೆ. ಆ ದಿನ *1* ನೇ ಆರೋಪಿತನ ಕೈಯಲ್ಲಿದ್ದ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ-*1* ಮಚ್ಚು ಅದೇ ಇರುತ್ತದೆ. ಘಟನೆ ಕಾಲಕ್ಕೆ ಪರಶಿವಪ್ಪ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ-*2* ಮತ್ತು *5* ಎಂದು ಗುರುತಿಸಿರುವ ಬಟ್ಟೆಗಳು ಪರಶಿವಪ್ಪ ಧರಿಸಿದ್ದ ಬಟ್ಟೆಗಳಿವೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-**

*4.* ಪರಶಿವಪ್ಪ ಇವರ ಶವ ಮಹಜರ್ ಕಾಲಕ್ಕೆ ನಾನು ಹಾಜರಿರಲಿಲ್ಲ. ದೂರು ಕೊಡುವ ಕಾಲಕ್ಕೆ ನಾನು ಹಾಜರಿದ್ದೆ. ದೂರು ಕೊಡುವ ಕಾಲಕ್ಕೆ ನನ್ನ ಹೇಳಿಕೆ ಪಡೆದಿಲ್ಲ. ಪರಶಿವಪ್ಪ ಇವರ ಮರಣದ ಬಳಿಕ ನಾನು ಹಲವು ಬಾರಿ ಪೋಲೀಸ್ ಠಾಣೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪರೀಕ್ಷೆಗೆ ಬಂದಾಗ ನಾನು ಹಾಜರಿದ್ದೆ. ಆ ಕಾಲಕ್ಕೆ ನನ್ನ ಹೇಳಿಕೆ ಪಡೆದಿಲರಲಿಲ್ಲ. ನಾನು ಮರಹಳ್ಳಿಪುರ ಗ್ರಾಮದಲ್ಲಿ ವಾಟರ್ ಮ್ಯಾನ್ ಕೆಲಸ ಮಾಡುತ್ತೇನೆ. ನನ್ನ ಹೆಂಡತಿ ಕೊಣನೂರು

ಗ್ರಾಮ ಪಂಚಾಯಿತಿ ಸದಸ್ಯರು ಇರುತ್ತಾರೆ. ನಾನು ಗ್ರಾಮ ಪಂಚಾಯಿತಿ ನೌಕರ ಎಂದರೆ ನಿಜ. ಆ ಕಾರಣಕ್ಕೆ ನಾನು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಇರುತ್ತೇನೆ ಎಂದರೆ ನಿಜ. 1 ನೇ ಆರೋಪಿ ಆದೀಶ ನನ್ನ ಸ್ನೇಹಿತನಲ್ಲ. ಆದರೆ ಒಂದೆ ಜನಾಂಗದವರು ಇದ್ದೇವೆ. ಪರಶಿವಪ್ಪನ ಘಟನೆಗೆ ಮುನ್ನ ಆದೀಶ ನನಗೆ ಹಲವು ಬಾರಿ ಫೋನ್ ಮಾಡಿದ್ದಾನೆ ಎಂದರೆ ಒಂದು ಬಾರಿ ಮಾತ್ರ ಮಾಡಿದ್ದಾನೆ. ಮರ ಕಡಿದ ವಿಚಾರಕ್ಕೆ ಆರೋಪಿತರು ಪರಶಿವಪ್ಪನ ವಿರುದ್ಧ ಪೊಲೀಸ್ ದೂರು ಕೊಟ್ಟಿರಲಿಲ್ಲ. ಆರೋಪಿತರ ಜಮೀನಿನ ಹತ್ತಿರದಲ್ಲೇ ನನ್ನ ಜಮೀನು ಸಹ ಇದೆ ಆದರೆ ನಾನು ಅಲ್ಲಿ ಸಾಗುವಳಿ ಮಾಡುತ್ತಿಲ್ಲ. ನಾನು ದಿನಾಲೂ ಆ ಜಮೀನಿನ ಮೂಲಕವೇ ಕೊಣನೂರು ಗ್ರಾಮಕ್ಕೆ ಹೊಗುತ್ತೇನೆ. ಕೊಣನೂರಿಗೆ ಹೊಗುವ ಜನರು ಮತ್ತು ದೇವಸ್ಥಾನಕ್ಕೆ ಹೊಗುವ ಜನರು ಆ ದಾರಿಯಲ್ಲಿ ಓಡಾಡುತ್ತಾರೆ. ಆರೋಪಿತರು ಮರ ಕಡಿದ ವಿಚಾರಕ್ಕೆ ನನ್ನನ್ನು ಅಲ್ಲಿಗೆ ಕರೆದು ತೋರಿಸಿಲ್ಲ. ಪರಶಿವಪ್ಪ ಟ್ರಾಕ್ಟರ್ ನಲ್ಲಿ ಉಳುವೆ ಮಾಡುವಾಗ ನನ್ನನ್ನು ಆ ಜಮೀನಿನ ಬಳಿ ಕರೆಸಿಲ್ಲ. ಪರಶಿವಪ್ಪ ಚೆನಾಕ್ಷಿ ಮರ ಕಡಿಯುವ ಕಾಲಕ್ಕೆ ಪರಶಿವಪ್ಪ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿರಲಿಲ್ಲ. ಚೆನಾಕ್ಷಿ ಮರಗಳು ಅಡ್ಡಹಳ್ಳದಲ್ಲಿ ಇದ್ದವು ಎಂದರೆ ನಿಜ. ಅಡ್ಡಹಳ್ಳ ಸರ್ಕಾರಕ್ಕೆ ಸೇರಿದ್ದು ಎಂದರೆ ನಿಜ. 15 ದಿನಗಳವರೆಗೆ ಪರಶಿವಪ್ಪನಾಗಲೀ ಆರೋಪಿತರಾಗಲೀ ಗಲಾಟೆ ಮಾಡಿಕೊಂಡಿರಲಿಲ್ಲ ಎಂದರೆ ನಿಜ. ಕೊಣನೂರಿನಿಂದ ಆ ಜಮೀನಿಗೆ ಬರಲು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ 10 ನಿಮಿಷ ಸಾಕಾಗುತ್ತದೆ. ನಾನು ಘಟನೆ ಬಗ್ಗೆ ಗೊತ್ತಾದ ತಕ್ಷಣ ಆ ಜಮೀನಿನ ಬಳಿ ಹೋಗಿದ್ದೆ. ಅಲ್ಲಿಗೆ ಹೊಗುವ ಮೊದಲು ಕೊಣನೂರಿನಲ್ಲಿ ಬೇರೆ ಯಾರಿಗೂ ವಿಷಯ ತಿಳಿಸಿರಲಿಲ್ಲ. ನಾನು ಘಟನೆ ಸ್ಥಳಕ್ಕೆ ಹೋದಾಗ ಆರೋಪಿತರು ಅಲ್ಲಿಯೇ ಇದ್ದರು ಮತ್ತು 1 ನೇ ಆರೋಪಿ ಕೈಯಲ್ಲಿ ಮಚ್ಚು ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ 1 ನೇ ಆರೋಪಿ ಮಚ್ಚಿನಿಂದ ಪರಶಿವಪ್ಪನಿಗೆ ಒಂದು ಏಟು ಹೊಡೆದಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಪರಶಿವಪ್ಪನ ಯಾವ ಭಾಗಕ್ಕೆ ಏಟು ಹೊಡೆದಿದ್ದ ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ನಿಜ. ನಾನು ಹೋಗುವ ಮುಂಚೆ

ಪರಶಿವಪ್ಪನಿಗೆ ಎಷ್ಟು ಗಾಯಗಳಾಗಿತ್ತು ಎಂದು ನಿಖರವಾಗಿ ಗೊತ್ತಿಲ್ಲ. ಪರಶಿವಪ್ಪರವರಿಗೆ ಪ್ರಭುಸ್ವಾಮಿ ಕಣ್ಣಿಗೆ ಮಣ್ಣು ಎರಚಿದ್ದ ಮತ್ತು ಆತನ ಮಗ ಹೊಡೆದಿದ್ದ ಎಂದು ಪೊಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಡುವಾಗ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಕ್ಕನ ಅಳಿಯ ಮಹೇಶ ಅಲ್ಲಿಗೆ ಹೊಗುವಷ್ಟರಲ್ಲಿ ಪ್ರಭುಸ್ವಾಮಿ ಮತ್ತು ಅವರ ಮಗ ಅಲ್ಲಿಂದ ಓಡಿಹೋಗಿದ್ದರು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಾನು ಕೊಣನೂರಿನಿಂದ ಆ ಸ್ಥಳಕ್ಕೆ ಹೊಗೇ ಇಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಫೋನ್ ಮಾಡಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ದಿನ ನಾನು ಮಚ್ಚನ್ನು ನೋಡಿದ್ದರಿಂದ ಅದನ್ನು ಗುರುತಿಸಿದ್ದೇನೆ. ಪರಶಿವಪ್ಪ ನನ್ನ ಹತ್ತಿರದ ಸಂಬಂಧ ಇರುವ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಶಿವಪ್ಪ ಗ್ರಾಮದಲ್ಲಿ ರಾಜಕೀಯ ಮುಖಂಡ ಎಂದರೆ ನಿಜ. ಅವರು ಅನೇಕ ಜನರ ಜೊತೆ ಹೊಡೆದಾಟ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಅವರು ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ನಿಜ. ರಾಜಕೀಯ ಮುಖಂಡರ ಜೊತೆ ಓಡಾಡುವುದೇ ಅವರ ಕೆಲಸವಾಗಿತ್ತು ಎಂದರೆ ನಿಜ. ಪರಶಿವಪ್ಪ ಇವರಿಗೆ ಆಗದೇ ಇದ್ದ ಬಹಳಷ್ಟು ಜನ ಗ್ರಾಮದಲ್ಲಿ ಇದ್ದರು ಎಂದರೆ ಸರಿಯಲ್ಲ. ಪರಶಿವಪ್ಪನಿಗೆ ಬೇರೆ ಯಾರೋ ಹೊಡೆದಿದ್ದು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ವ್ಯವಸಾಯದಿಂದ ಉತ್ತಮ ಫಸಲು ಪಡೆಯುತ್ತಾರೆ ಮತ್ತು ಹೊಸ ಮನೆ ಕಟ್ಟಿದ್ದಾರೆ ಎಂದರೆ ನಿಜ. ಆ ಘಟನೆ ದಿನ ಕೊಣನೂರಿಗೆ ಹೊಗುವ ಮೊದಲು ನಾನು ಪರಶಿವಪ್ಪನನ್ನು ನೋಡಿರಲಿಲ್ಲ. ಪರಶಿವಪ್ಪನವರು ಅಕ್ಕಪಕ್ಕದ ಗ್ರಾಮಗಳ ಕಾರ್ಯಕ್ರಮಗಳಿಗೆ ಹೊಗುತ್ತಿದ್ದರು ಎಂದರೆ ನಿಜ. ಪರಶಿವಪ್ಪನ ಜಮೀನಿನ ದಕ್ಷಿಣಕ್ಕೆ ಇರುವ ಅಡ್ಡಹಳ್ಳ 10–12 ಅಡಿ ಆಳದ್ದು ಇದೆ ಎಂದರೆ ಸರಿಯಲ್ಲ. ಮಳೆಗಾಲದಲ್ಲಿ ಅಡ್ಡಹಳ್ಳದ ಮೂಲಕ ಕೆರೆಗಳಿಗೆ ನೀರು ಹೊಗುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಮಳೆ ಬಂದಾಗ ನೀರು ಹೊಗುತ್ತದೆ. ಅಡ್ಡಹಳ್ಳದಲ್ಲಿ ವಾಹನಗಳು ಓಡಾಡಲು ಆಗುವುದಿಲ್ಲ ಎಂದರೆ ನಿಜ. ಆ ಹಳ್ಳದ ಪಕ್ಕದ ತೆವರಿ ಮೂಲಕವೇ ಎಲ್ಲರೂ

ಓಡಾಡುತ್ತಾರೆ ಎಂದರೆ ನಿಜ. ಬಹಳ ವರ್ಷಗಳ ಹಿಂದೆಯೇ *2* ಆರೋಪಿ ಮತ್ತು ಪರಶಿವಪ್ಪರು ಭಾಗವಾಗಿದ್ದಾರೆ ಎಂದರೆ ನಿಜ. ಭಾಗವಾದಾಗಿನಿಂದ ಪರಶಿವಪ್ಪನ ಜಮೀನಿನ ತೆವರಿನಲ್ಲಿಯೇ ಆರೋಪಿತರು ಓಡಾಡುತಿತದ್ದರು ಎಂದರೆ ನಿಜ. ಆ ಕಾಲಕ್ಕೆ ಗಲಾಟೆ ಇರಲಿಲ್ಲ ಎಂದರೆ ನಿಜ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು